ANUBHAVS



# ಓಂ ಜಯ ಅನಿರುದ್ಧ

© Copyright 2010, Manasamarthyadata.com

manasamarthyadata.com



*- ಶಿವಕುಮಾರ್, ಕಾಂದಿವಲಿ*

ಹರಿ ಓಂ ಬಾಪೂ ನಮ್ಮ ನಿಮ್ಮ ಪರಿಚಯವಿಲ್ಲ. ನಾನೊಬ್ಬ ಮದ್ರಾಸಿ ಗ್ರಹಸ್ಥ. ನಾನೊಂದು ಮೋಲ್ಡಿಂಗ್' ಮೆಶೀನಿನ ಕಂಪೆನಿ ಯಲ್ಲಿ ಕೆಲಸಕ್ಕಿದ್ದೇನೆ. ನಮ್ಮ ಕಂಪೆನಿಯ ಎದುರುಗಡೆಗೊಂದು ಮನೆಯಿಂದೆ. ಆ ಮನೆಯಲ್ಲಿ ಒಬ್ಬ ಬಾಪೂಭಕ್ತ ವಾಸಿಸುತ್ತಾರೆ.

ಒಂದು ದಿನ ಏನೋ ತಾಗಿ ನನ್ನ ಕಾಲು ಬಾತುಕೊಂಡಿತ್ತು. ನನಗೆ ನಡೆಯುವುದಕ್ಕೂ ಆಗುತ್ತಿರಲಿಲ್ಲ. ಏನೂ ಕೆಲಸ ಮಾಡುವುದಕ್ಕೂ ಆಗುತ್ತಿರಲಿಲ್ಲ. ನಾನು ಈ ಕಾಲು ನೋವಿಗಾಗಿ ಹಲವಾರು ಉಪಾಯಗಳನ್ನು ಮಾಡಿದರೂ ಕೂಡಾ ಏನೂ ಪ್ರಯೋಜನವಾಗಲಿಲ್ಲ. ಡಾಕ್ಟರ್‌ಗಳಿಗೆ ಸಾವಿರಾರು ರೂಪಾಯಿಗಳನ್ನು ಸುರಿದೆನು. ಆದರೆ, ಏನೊಂದೂ ಪ್ರಯೋಜನವಾಗಲಿಲ್ಲ. ಎರಡು ಮೂರು ತಿಂಗಳುಗಳವರೆಗೂ ಔಷಧಿ ಮತ್ತು ಮಾತ್ರೆಗಳನ್ನು ತೆಗೆದುಕೊಳ್ಳುತ್ತಲ್ಲೇ ಇದ್ದರೂ ಕೂಡಾ ಗುಣವಾಗಲಿಲ್ಲ. ಹೀಗಿರುವಾಗ ಒಂದು ದಿನ ನನ್ನ ಬಾತುಕೊಂಡಿದ್ದ ಕಾಲು ನೋಡಿದ ನಮ್ಮ ಕಂಪೆನಿಯ ಎದುರು ಮನೆಯಾಕೆಯು ನನಗೆ ಸದ್ಗುರು ಬಾಪೂರವರ ಸಂಸ್ಥೆಯಿಂದ ತಂದ ವಿಭೂತಿಯನ್ನು (ಉದಿಯನ್ನು) ಕೊಟ್ಟರು. ಅವರು ಹೇಳಿದ ಪ್ರಕಾರ ನಾನು ಆ ಉದಿಯನ್ನು ಎಣ್ಣೆಗೆ ಬೆರಸಿ ರಾತ್ರಿ ಮಲಗುವಾಗ ಕಾಲಿಗೆ ಹಚ್ಚಿದೆನು. ಬೆಳಿಗ್ಗೆ ಎದ್ದಾಗ ನೋಡುವುದೇನನ್ನು? ನನ್ನ ಕಾಲಿನ ಬಾವು ಕಡಿಮೆಯಾಗಿದ್ದಿತು. ಆಗ ನಾನು ಆ ಬಾಪೂ ಭಕ್ತ ಸ್ತ್ರೀಯ ಹತ್ತಿರ ಪುನಃ ಹೋಗಿ ಉದಿ ಮತ್ತು ಸದ್ಗುರು ಶ್ರೀ ಅನಿರುದ್ಧ ಬಾಪೂರವರ ಫೋಟೋವನ್ನು ಕೇಳಿ ಪಡೆದುಕೊಂಡೆನು. ಸತತವಾಗಿ ಎರಡು ದಿನ ರಾತ್ರಿ ಮಲಗುವಾಗ ನಾನು ನನ್ನ ಕಾಲಿಗೆ ಉದಿ ಹಚ್ಚಿದೆನು. ಆಗ ಏನಾಶ್ಚರ್ಯ! ಒಂದೆ ವಾರದೊಳಗೆ ನನ್ನ ಕಾಲು ಗುಣವಾಯಿತು. ನಿಜವಾಗಿಯೂ ನನಗೆ ಬಾಪೂರವರ ಬಗೆಗೆ ಏನೇನೂ ತಿಳಿದಿರಲಿಲ್ಲ. ಆದರೆ, ಆ ಹೆಂಗಸಿನಿಂದಾಗಿ ನನಗೆ ಉದಿ ಸಿಕ್ಕಿತು ಹಾಗೂ ನಾನು ಬಾಪೂರವರನ್ನು ನಂಬತೊಡಗಿದೆನು. ಈಗ ನಾನು ಬಾಪೂರವರನ್ನು ಮನಃಪೂರ್ವಕವಾಗಿ ಪೂಜಿಸುತ್ತೇನೆ. ಈ ರೀತಿ ನನ್ನ ಸಹಾಯಕ್ಕಾಗಿ ಧಾವಿಸಿ ಬರುವ ಬಾಪೂರವರಿಗೆ ನಾನು ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತೇನೆ.

ANUBHAVS

# HARI OM

© Copyright 2010, Manasamarthyadata.com

manasamarthyadata.com